# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 943 |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14.03.2025. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪಂಚಾಯತ್ ರಾಜ್ ಇಲಾಖೆಯ ಪಿ.ಡಿ.ಓ.ಗಳ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ದಿನಾಂಕ:03.07.2023ರಿಂದ 12.03.2024ರ ವರೆಗೆ ಕೆ.ಎ.ಟಿ. ಅರ್ಜಿ ಸಂಖ್ಯೆ:3349/2023ರ ಆದೇಶದ ವಿರುದ್ಧವಾಗಿ ನೇರ ಹಾಗೂ ಬಡ್ತಿ ಕೋಟಾದಲ್ಲಿ ಖಾಲಿ ಹುದ್ದೆಗಳಲ್ಲಿ ಅಂತಹ ಜಿಲ್ಲಾ ವರ್ಗಾವಣೆ ಮಾಡಿದ ಸಂಖ್ಯೆ ಮತ್ತು ವರ್ಗಾವಣೆ ಹೊಂದಿದ ನೌಕರರ ವಿವರಗಳೇನು; (ಹೆಸರು ಹಾಗೂ ಈ ಆದೇಶಗಳಿಗೆ ಮಂಡಿಸಿರುವ ಟಿಪ್ಪಣಿ ಪ್ರತಿ ನೀಡುವುದು) | ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದವನ್ನು ರಾಜ್ಯ ವೃಂದವನ್ನಾಗಿ ದಿನಾಂಕ:29-03-2023 ರಂದು ಪರಿವರ್ತಿಸಿದ ಪ್ರಯುಕ್ತ ರಾಜ್ಯಾವಾರು ಲಭ್ಯವಿರುವ ಖಾಲಿ ಹುದ್ದೆಗಳ ಎದುರು ಯಾವುದೇ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ವರ್ಗಾವಣೆ ಮಾಡಲು ಅವಕಾಶವಿದೆ. ಲಭ್ಯವಿರುವ ಹುದ್ದೆಗಳನ್ನು ವರ್ಗಾವಣೆಗಾಗಿ ನೇರ ನೇಮಕಾತಿ/ಮುಂಬಡ್ತಿ ಹುದ್ದೆಗಳೆಂದು ವರ್ಗೀಕರಿಸಿರುವುದಿಲ್ಲ.<br><br>ನೇರ ನೇಮಕಾತಿ ಸಂದರ್ಭದಲ್ಲಿ ಮಾತ್ರ ಮೀಸಲಿಟ್ಟ ಒಟ್ಟು ಹುದ್ದೆಗಳನ್ನು ಪರಿಗಣಿಸಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು. ಆದರೆ ವರ್ಗಾವಣೆಗೆ ಈ ರೀತಿ ಹುದ್ದೆಗಳನ್ನು ವಿಂಗಡಿಸಲು ಅವಕಾಶವಿರುವುದಿಲ್ಲ. |
| (ಆ) | ದಿನಾಂಕ:13.03.2024ರ ಅಧಿಸೂಚನೆಯನ್ವಯ ಪಿ.ಡಿ.ಓ. ಹುದ್ದೆ ರಾಜ್ಯ ವೃಂದವಾಗಿ ಮಾರ್ಪಾಟುಗೊಳ್ಳದಿದ್ದರೆ ದಿನಾಂಕ:28.02.2025ರಲ್ಲಿದ್ದಂತೆ ಜಿಲ್ಲಾವಾರು ಈ ವೃಂದದ ನೇರ ಹಾಗೂ ಬಡ್ತಿ ಕೋಟಾದಲ್ಲಿ ಎಷ್ಟು ರಿಕ್ತಸ್ಥಾನಗಳಿರುತ್ತಿದ್ದವು; | ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ದಿನಾಂಕ:29-03-2023 ರಂದು ರಾಜ್ಯ ವೃಂದವನ್ನಾಗಿ ಮಾರ್ಪಾಟು ಮಾಡಲಾಗಿರುವುದರಿಂದ ಪ್ರಸ್ತುತ ಎಲ್ಲಾ ಜಿಲ್ಲೆಗಳಲ್ಲಿ ಲಭ್ಯವಿರುವ ಹುದ್ದೆಗಳು ಒಟ್ಟಾರೆ ರಾಜ್ಯ ವೃಂದ ಬಲ ಎಂದು ಪರಿಗಣಿಸಲಾಗುತ್ತಿದೆ. ಹಾಗಾಗಿ ಈ ಹಂತದಲ್ಲಿ ಜಿಲ್ಲಾವಾರು ಹುದ್ದೆಗಳ ಲೆಕ್ಕಾಚಾರ ಮತ್ತು ಹುದ್ದೆಗಳನ್ನು ಜಿಲ್ಲಾವಾರು ನೇರ ನೇಮಕಾತಿ ಹಾಗೂ ಬಡ್ತಿ ಕೋಟಾದಡಿ ವಿಂಗಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |
| (ಇ) | ಸರ್ಕಾರವು ದಿನಾಂಕ:01.10.2024ರಂದು ಪ್ರಕಟಿಸಿರುವ ಗ್ರೇಡ್-1 ಕಾರ್ಯದರ್ಶಿಗಳ ರಾಜ್ಯ ಮಟ್ಟದ ಕರಡು ಜೇಷ್ಠತಾ ಪಟ್ಟಿಗೆ ಬಂದಂತಹ ಆಕ್ಷೇಪಣೆಗಳಾವುವು ಈ ಆಕ್ಷೇಪಣೆಗಳಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; (ಆಕ್ಷೇಪಣೆವಾರು ಸರ್ಕಾರದ ಉತ್ತರಗಳ ಪ್ರತಿ ನೀಡುವುದು) | ದಿನಾಂಕ:01-10-2024 ರಂದು ಪಂಚಾಯತ್ ರಾಜ್ ಆಯುಕ್ತಾಲಯದಿಂದ ಪ್ರಕಟಿಸಲಾದ ರಾಜ್ಯ ಮಟ್ಟದ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ (ಗ್ರೇಡ್-1) ಜ್ಯೇಷ್ಠತಾ ಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ. ರಾಜ್ಯ ಮಟ್ಟದ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ (ಗ್ರೇಡ್-1) ಜ್ಯೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸದಿರುವುದರಿಂದ ಸ್ವೀಕೃತ ಆಕ್ಷೇಪಣೆಗಳಿಗೆ ಉತ್ತರಗಳನ್ನು ನೀಡಿರುವುದಿಲ್ಲ. |
| (ಈ) | ಸದರಿ ರಾಜ್ಯ ಮಟ್ಟದ ಕರಡು ಜೇಷ್ಠತಾ ಪಟ್ಟಿ ಅಂತಿಮಗೊಳಿಸಲು ಸರ್ಕಾರದ ಮುಂದಿರುವ ಅಡೆತಡೆಗಳೇನು; ಹಾಗೂ ಜೇಷ್ಠತಾ | ರಾಜ್ಯ ಮಟ್ಟದ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ (ಗ್ರೇಡ್-1) ಜ್ಯೇಷ್ಠತಾ ಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳಲ್ಲಿನ ವಿವರಗಳಿಗೂ ಹಾಗೂ ಜಿಲ್ಲಾ ಮಟ್ಟದ ಅಂತಿಮ ಜ್ಯೇಷ್ಠತಾ ಪಟ್ಟಿಯಲ್ಲಿನ |

| | | |
|---|---|---|
| | ಪಟ್ಟಿಯಲ್ಲಿನ ಆಕ್ಷೇಪಣೆಗಳನ್ನು ಅಂತಿಮಗೊಳಿಸದೇ ಎಲ್ಲಾ ಜಿಲ್ಲಾ ಪಂಚಾಯಿತಿಗೆ ದಿನಾಂಕ:31.12.2024ರ ಪತ್ರದ ಪ್ರಕಾರ ಮತ್ತೆ ಜಿಲ್ಲಾ ಮಟ್ಟದ ಗ್ರೇಡ್-1 ಕಾರ್ಯದರ್ಶಿಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವಂತೆ ಸೂಚಿಸಲು ಕಾರಣವೇನು; | ವಿವರಗಳಿಗೂ ವ್ಯತ್ಯಾಸಗಳು ಕಂಡು ಬಂದಿರುತ್ತವೆ.<br><br>ರಾಜ್ಯ ಮಟ್ಟದ ಜ್ಯೇಷ್ಠತಾ ಪಟ್ಟಿಯನ್ನು ಜಿಲ್ಲಾ ಪಂಚಾಯತಿಗಳು ಅಂತಿಮಗೊಳಿಸಿದ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ತಯಾರಿಸಲಾಗುವುದರಿಂದ, ಅಂತಹ ಆಕ್ಷೇಪಣೆಗಳನ್ನು ಮೊದಲಿಗೆ ಜಿಲ್ಲಾ ಮಟ್ಟದ ಜ್ಯೇಷ್ಠತಾ ಪಟ್ಟಿಗಳಲ್ಲಿ ಪರಿಶೀಲಿಸಿ, ಸರಿಪಡಿಸುವ ಅಗತ್ಯವಿರುತ್ತದೆ.<br><br>ಈ ಕಾರಣಗಳಿಂದ ಮತ್ತು ಕರ್ನಾಟಕ ದಿನಾಂಕ: 31-12-2023ರ ಅಂತ್ಯದವರೆಗಿನ (ಒಂದು ವರ್ಷದ ಹಿಂದಿನ) ಜ್ಯೇಷ್ಠತಾ ಪಟ್ಟಿಯನುಸಾರ ಬಡ್ತಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ನಿಯಮಾನುಸಾರ ಅವಕಾಶಗಳಿಲ್ಲದಿರುವುದರಿಂದ, ಸರ್ಕಾರಿ ನೌಕರರ (ಜ್ಯೇಷ್ಠತಾ) ನಿಯಮಗಳು, 1957ರ ನಿಯಮ, 10 ರನ್ವಯ ದಿನಾಂಕ:01-01-2025ರಲ್ಲಿದ್ದಂತೆ ಜಿಲ್ಲಾ ಮಟ್ಟದ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲು ಜಿಲ್ಲಾ ಪಂಚಾಯತಿಗಳಿಗೆ ಸೂಚನೆಯನ್ನು ನೀಡಲಾಗಿರುತ್ತದೆ. |
| (ಉ) | ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957ರ ನಿಯಮ 10 ಅಡಿ ನೇಮಕಾತಿ ಪ್ರಾಧಿಕಾರವು ಸಿದ್ಧಪಡಿಸಬೇಕಾದ ಜ್ಯೇಷ್ಠತಾ ಈ ಗ್ರೇಡ್-1 ಕಾರ್ಯದರ್ಶಿಗಳ ಜಿಲ್ಲಾ ಮಟ್ಟದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ತಡೆಹಿಡಿಯುವಂತೆ ಸರ್ಕಾರಕ್ಕೆ ಸೂಚಿಸಲು ಕಾನೂನಿನಲ್ಲಿ ಅವಕಾಶವಿದೆಯೇ; | ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಮತ್ತು ನೇಮಕಾತಿ ಪ್ರಾಧಿಕಾರದಿಂದ ಸಿದ್ಧಪಡಿಸಬೇಕಾದ ಜ್ಯೇಷ್ಠತಾ ಪಟ್ಟಿಯನ್ನು ತಾತ್ಕಾಲಿಕವಾಗಿ ತಡೆ ಹಿಡಿಯುವ ಬಗ್ಗೆ ಸರ್ಕಾರದಿಂದ ಯಾವುದೇ ನಿರ್ದೇಶನಗಳನ್ನು ನೀಡಿರುವುದಿಲ್ಲ. |
| (ಊ) | ದಿನಾಂಕ:31.12.2024ರ ಆಯುಕ್ತಾಲಯದ ಪತ್ರದ ಪ್ರಕಾರ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು ಪ್ರಕಟಿಸಿದ ಗ್ರೇಡ್-1 ಕಾರ್ಯದರ್ಶಿಗಳ ಜ್ಯೇಷ್ಠತಾ ಪಟ್ಟಿಗಳನ್ನು ಇಲ್ಲಿಯವರೆಗೆ ಅಂತಿಮಗೊಳಿಸದಿರಲು ಕಾರಣಗಳೇನು? | ದಿನಾಂಕ:31-12-2024ರ ಪತ್ರದನ್ವಯ ಎಲ್ಲಾ ಜಿಲ್ಲಾ ಪಂಚಾಯತಿಗಳು ದಿನಾಂಕ:01-01-2025 ರಲ್ಲಿದ್ದಂತೆ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗಳನ್ನು ಹೊರಡಿಸಿರುತ್ತಾರೆ. ಸದರಿ ಜ್ಯೇಷ್ಠತಾ ಪಟ್ಟಿಗಳಿಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಆಯಾ ಜಿಲ್ಲಾ ಪಂಚಾಯತಿಗಳಲ್ಲಿ ಪರಿಶೀಲಿಸಲಾಗುತ್ತಿದ್ದು, ಶೀಘ್ರದಲ್ಲಿ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮ ವಹಿಸಲಾಗುತ್ತದೆ. |

ಸಂಖ್ಯೆ: ಗ್ರಾಅಪ 197 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.